ಅ. ರಾಜೀವ್ ಗಾಂಧಿ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಾಗಿ ಆಯ್ಕೆಯಾದವರಿಗೆ ಅವರ ಹೆಸರಿನಲ್ಲಿ ಜಮೀನು ಇರಬೇಕೆಂದು ಹೊರಡಿಸಿದ ಸುತ್ತೋಲೆ ವಿಷಯ ಸರಕಾರದ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಈ ಸುತ್ತೋಲೆಯಿಂದ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದೇ ತಾಲ್ಲೂಕು ಪಂಚಾಯಿತಿಗಳಿಗೆ ನಿದಿಪಡಿಸಿದ ಗುರಿ ಸಾಧಿಸುವಲ್ಲಿ ತೊಡಕುಂಟಾಗುವುದಿಲ್ಲವೆ;

ಇ. ಇಂದಿರಾ ಆವಾಸ್ ಮತ್ತು ಅಂಬೇಡ್ಕರ್ ಐ.ಟಿ.ಡಿ.ಸಿ. ಮನೆಗಳಿಗೆ ಫಲಾನುಭವಿಗಳ ಹೆಸರಿಗೆ ಆರ್.ಟಿ.ಸಿ. ಇರಬೇಕೆಂಬ ನಿಯಮ ಇಲ್ಲದಿರುವಾಗ, ರಾಜೀವ್‌ಗಾಂಧಿ ಆಶ್ರಯ ಯೋಜನೆ ಮಾತ್ರ ಆರ್.ಟಿ.ಸಿ. ಕೇಳುವ ಉದ್ದೇಶವೇನು;

ಈ. ಈ ನಿಯಮ ಪಡಿಲಿಸಿ, ಸರಕಾರ ಆದೇಶ ಹೊರಡಿಸುವುದೇ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ಹೌದು.

ಆ. ಇಲ್ಲ.

ಇ. ಸಾಲ ಮರುಪಾವತಿಗಾಗಿ ಮತ್ತು ಮನೆಯನ್ನು 15 ವರ್ಷಗಳ ಕಾಲ ಪರಭಾರೆ ಮಾಡಬಾರದೆಂಬುದಕ್ಕಾಗಿ ಫಲಾನುಭವಿಯು ಅಡಮಾನ ಪತ್ರವನ್ನು ಬರೆದುಕೊಡಬೇಕಾಗುತ್ತದೆ. ಅಡಮಾನ ಪತ್ರದಲ್ಲಿರುವ ಷರತ್ತುಗಳನ್ನು ಪಾಲಿಸುವುದಕ್ಕಾಗಿ ಫಲಾನುಭವಿಗಳ ಆರ್.ಟಿ.ಸಿ.ಯಲ್ಲಿ ಅಡವಿನ ದಾಖಲೆಯನ್ನು ಮಾಡಲು ಸೂಚಿಸಿದೆ. ಹಿಂದಿನಿಂದಲೂ ಆರ್.ಟಿ.ಸಿ.ಯಲ್ಲಿ ಈ ರೀತಿದಾಖಲು ಮಾಡುವುದು ವಾಡಿಕೆಯಲ್ಲಿದ್ದು, ಅದನ್ನೇ ಮುಂದುವರಿಸಲಾಗುತ್ತಿದೆ. ಆರ್.ಟಿ.ಸಿ.ಯಲ್ಲಿ ಈ ರೀತಿ ದಾಖಲೆ ಮಾಡದೇ ಇದ್ದಲ್ಲಿ, ಫಲಾನುಭವಿಯು ಅದೇ ಮನೆಯ ಮೇಲೆ ಮತ್ತೆ ಸಾಲ ಮಾಡಿ ತೊಂದರೆಗೀಡಾಗಬಹುದು ಅಥವಾ ಮನೆಯನ್ನು ಪರಭಾರೆ ಮಾಡಿ ಮನೆಯನ್ನೇ ಕಳೆದುಕೊಳ್ಳಬಹುದು. ಅಲ್ಲದೇ ಪದೇ ಪದೇ ಮನೆಬೇಕೆಂದು ಬೇಡಿಕೆ ಸಲ್ಲಿಸುವ ಸಂಭವವಿದ್ದು, ಇದನ್ನು ತಪ್ಪಿಸಬೇಕಾಗಿದೆ. ಆರ್.ಟಿ.ಸಿ.ಯಲ್ಲಿ ದಾಖಲಿಸಿದರೆ ಹೀಗಾಗುವ ಸಂಭವವಿಲ್ಲ. ಆದ್ದರಿಂದ ಇದು ಫಲಾನುಭವಿಯ ಅನುಕೂಲಕ್ಕಾಗಿಯೇ ಇದೆ.

ಈ. ಉದ್ಭವಿಸುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಆಶ್ರಯ ಮನೆಗಳು

1480(2084) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉಡುಪಿ ಜಿಲ್ಲೆಯಲ್ಲಿ 93-94ನೇ ಸಾಲಿನಿಂದ ಆಶ್ರಯ ಮನೆ ಮಂಜೂರಾತಿ ಹಣ ಬಿಡುಗಡೆ ಮಾಡಲು ಬಾಕಿ ಇರುವುದು ಸರಕಾರದ ಗಮನಕ್ಕೆ ಬಂದಿಯೆ;

ಆ. ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ 93-94ನೇ ಸಾಲಿನಿಂದ ಎಷ್ಟು ಆಶ್ರಯ ಮನೆ ಹಣ ಬಿಡುಗಡೆ ಬಾಕಿ ಇದೆ; ಎಷ್ಟು ಫಲಾನುಭವಿಗಳಿಗೆ ಹಣ ಪಾವತಿ ಬಾಕಿ ಇದೆ; ಯಾವಾಗ ಬಿಡುಗಡೆ ಮಾಡಲಾಗುವುದು; (ವರ್ಷಾವಾರು ವಿವರ ನೀಡುವುದು)

ಇ. ಸಕಾಲದಲ್ಲಿ ಹಣ ಬಿಡುಗಡೆ ಮಾಡದೇ ಇರುವುದರಿಂದ ಫಲಾನುಭವಿಗಳು ಕಷ್ಟ ಅನುಭವಿಸಿ ಸರಕಾರದ ಜನಪ್ರಿಯ ಯೋಜನೆಗಳಿಂದ ವಂಚಿತರಾಗಿ ಸಾಲಕ್ಕೆ ಮೊರೆ ಹೋಗುವ ಪರಿಸ್ಥಿತಿ ಸರ್ಕಾರವೇ ನಿರ್ಮಿಸಿದಂತಾಗುವುದಿಲ್ಲವೆ;

ಈ. 2003-04 ಸಾಲಿನಿಂದ ಆಶ್ರಯ ಮನೆಗಳ ಮಂಜೂರಾತಿಯೊಂದಿಗೆ ಹಣ ಬಿಡುಗಡೆ ಮಾಡಲಾಗುವುದೆ;

ಉ. ಸರ್ಕಾರ ಕೊಡುವ ರೂಪಾಯಿ 20000ಯಿಂದ ಮನೆಕಟ್ಟಿಕೊಳ್ಳಲು ಸಾಧ್ಯವೆ;

ಸದರಿ ಮೊತ್ತವನ್ನು ಕನಿಷ್ಟ ರೂ. 50000ಕ್ಕೆ ಹೆಚ್ಚಿಸಿ ಮನೆ ನಿರ್ಮಾಣಕ್ಕೆ ಸಹಾಯ ಮಾಡುವ ಯೋಜನೆ ಸರ್ಕಾರಕ್ಕಿದೆಯೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ

ಈ. ಅವಶ್ಯಕತೆಗನುಗುಣವಾಗಿ ಹಣ ಬಿಡುಗಡೆ ಮಾಡಲಾಗುವುದು

ಉ. ಹೌದು

ಇಲ್ಲ

ಆರೋಗ್ಯ ಇಲಾಖೆಯಲ್ಲಿ ತೆರವಾದ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ನೇಮಕ

1481(2085) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಆರೋಗ್ಯ ಇಲಾಖೆಯಲ್ಲಿ ತೆರವಾದ ವೈದ್ಯರು, ತಾಂತ್ರಿಕ ಮತ್ತು ಇತರೆ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುವುದೆಂದು ಈ ಹಿಂದೆ ನೀಡಲಾದ ಹೇಳಿಕೆಯನ್ನು ಅನುಷ್ಠಾನಕ್ಕೆ ತರಲಾಗಿದೆಯೇ?

ಆ. ಹಾಗಿದ್ದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ಅಧಿವೇಶನದ ನಂತರ ನೇಮಿಸಲಾದ ವೈದ್ಯರು ಮತ್ತು ಸಿಬ್ಬಂದಿಗಳ ವಿವರವನ್ನು (ಆಸ್ಪತ್ರೆವಾರು ಒದಗಿಸುವುದು)

ಇ. ಸದರಿ ನೇಮಕದ ನಂತರ ತೆರವಾದ ಹುದ್ದೆಗಳೆಷ್ಟು? (ಆಸ್ಪತ್ರೆವಾರು ಒದಗಿಸುವುದು)

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ಹೌದು

ಆ. ಕಳೆದ ಅಧಿವೇಶನದ ನಂತರ ಕುಂದಾಪುರ ತಾಲ್ಲೂಕಿನಲ್ಲಿ ಈ ಕೆಳಗೆ ತೋರಿಸಿದಂತೆ ವೈದ್ಯರ ಮತ್ತು ಸಿಬ್ಬಂದಿಯನ್ನು ನೇಮಿಸಿದ ವಿವರ:

ಗುತ್ತಿಗೆ ಆಧಾರದಲ್ಲಿ ನೇಮಕಾತಿಗೊಳಿಸಿದ ವೈದ್ಯಾಧಿಕಾರಿಗಳ ಹುದ್ದೆ:

ಕ್ರ.ಸಂ	ಸಂಸ್ಥೆಯ ಹೆಸರು	ಸಂಖ್ಯೆ
1	ಪ್ರಾ.ಆ. ಕೇಂದ್ರ ವಂಡ್ಸೆ	1